282

ಮೈಸೂರ ಗೆಜೆಟ

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಮೇ ತಾ॥ 3, ಸ್ಯ॥ 1884.

ಗಮನ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರುವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ರೆಸಿಡೆಂಟರ ಇಲಾಖಾ.

ಇಸ್ತಿಹಾರ್ ನಾಮೆ.

ನಂ. 1. ತಾರೀಖು 3ನೇ ಏಪ್ರೆಲ್ 1884.

ಮೈಸೂರು ದೇಶದ ರೆಸಿಡೆಂಟರವರು, 1884ನೇ ಇಸವಿ ಜನವರೀ 30ನೇ ಮತ್ತು 24ನೇ ನಂಬರ್ ಇಸ್ತಿಹಾರ್‌ನಾಮೆಯೊಡನೆ ಪ್ರಕಟಿಸಲ್ಪಟ್ಟ ಬೆಂಗಳೂರು ಸಿವಿಲ್ ವ ಮಿಲಿಟೇರಿ ಸ್ಟೇಷನಿಗೋಸ್ಕರ ಮ್ಯುನಿಸಿಪಲ್ ಕಮ್ಮಿಷ್ನರ್‌ಗಳ ಚುನಾವಣೆಯನ್ನು ಕ್ರಮಪಡಿಸುವ ಬಗ್ಯೆ ಉಂಟಾದ ನಿಬಂಧನೆಗಳಲ್ಲಿ ಇದರಡಿ ಬರುವ ಬದಲಾವಣೆಗಳು ಮಾಡಲ್ಪಡತಕ್ಕದ್ದೆಂದು ಹುಕ್ಕುಂ ಮಾಡುತ್ತಾರೆ:—

1. ಪೀಠಿಕೆ ಮತ್ತು 1—2ನೇ ನಿಬಂಧನೆಗಳಿಗೆ ಬದಲಾಗಿ ಇದರಡಿ ಬರುವದನ್ನು ಸೇರಿಸತಕ್ಕದ್ದು:—

" 1883ನೇ ಇಸವಿಯ ಬೆಂಗಳೂರು ಮ್ಯುನಿಸಿಪಲ್ ರೆಗ್ಯೂಲೇಷ್ನ 3 ವ 5ನೇ ಸೆಕ್ಷನಿನ ನಿಯಮಗಳನುಸರಿಸಿ ಮೈಸೂರು
" ದೇಶದ ರೆಸಿಡೆಂಟರವರು ಹುಕುಂ ಮಾಡುವದೇನೆಂದರೆ, ಬೆಂಗಳೂರು ಸಿವಿಲ್ ವ ಮಿಲಿಟೇರಿ ಸ್ಟೇಷನಿನ ಯಕ್ಸ್ ಆಫಿಷ್ಯೋ ಯಾನೆ ಉ
" ದ್ಯೋಗಧರ್ಮತಃ ಮೆಂಬರುಗಳಲ್ಲದ ಇತರ ಮ್ಯುನಿಸಿಪಲ್ ಕಮ್ಮಿಷ್ನರುಗಳು ಸ್ಥಳವಿಭಾಗಗಳ ಅನುಸಾರಕ್ಕೆ ಬದಲಾಗಿ ಪ್ರಜೆಗಳ ತರೆ
" ಗತಿಗಳನುಸರಿಸಿ ಐಯಿಂದ ಮೊಕರರ್ರ‍್ಮಾಡಲ್ಪಡತಕ್ಕದ್ದು; ಮತ್ತು ಉದ್ಯೋಗಗಳು ಖಾಲಿಆದಾಗ ಅವುಗಳು ಈ ನಿಬಂಧನೆಗಳನುಸರಿಸಿ
" ಚುನಾವಣೇ ಮೂಲಕ ಭರ್ತೀಮಾಡಲ್ಪಡತಕ್ಕದ್ದು.

2. "ಇದರಡಿ ಕಂಡ ನಿಬಂಧನೆಗಳಿಂದ ಇರಾದೆ ಕೊಡುವದಕ್ಕೆ ಅರ್ಹರಾದ ಸಿವಿಲ್ ವ ಮಿಲಿಟೇರಿ ಸ್ಟೇಷನಿನ ತಮಾಂ ಪ್ರಜೆಗಳ್ಗೂ
" ಇದರಡಿ ಕಂಡ ಮೂರು ತರಗತಿಗಳ ಪೈಕಿ ಬಂದರಲ್ಲಿ ದಾಖಲ್ಮಾಡಲ್ಪಟ್ಟು ಅಂಥಾ ಪ್ರತಿ ತರಗತಿಯ ಇರಾದೆದಾರರೂ ಈ ಕೆಳಗಿನ ದಾವೆಯಾ
" ಷಾಯಿ ಪ್ರಕಾರ ಅವರ ಪ್ರತಿನಿಧಿಗಳನ್ನು ಪ್ರತ್ಯೇಕವಾಗಿ ಚುನಾಯಿಸತಕ್ಕದ್ದು.

ತರಗತಿಯ ಸೆಸರು.		ಪ್ರತಿನಿಧಿಗಳ ಸಂಖ್ಯೆ.
(1)	ಯೂರೋಪಿಯ್ಯೆ ವ ಯೂರೇಷಿಯ್ಯರು ..	6
(2)	ಮಹಮ್ಮದೀಯರು ..	4
(3)	ಹಿಂದೂ ವ ಇತರರು ..	8

18 "

(2) 6ನೇ ರೂಲಿನ (ಬಿ) ಕ್ಲಾಜಿನ ಪಕ್ಕದಲ್ಲಿ ನಮೂದ್‌ಮಾಡಲ್ಪಟ್ಟ "ಪ್ಲಾನೆಗಳು, ಕಟ್ಟಗಳು, ಅಥವಾ ಜಮ್ಮಿಗಳು ಇವುಗಳ ಮೇಲೆ ವಟ್ಟುಕೆಲಸಗಳಿಗಾಗಿಯಾಗಲಿ, ಬೆಳಕು ಬೆಂಟುಮಾಡುವ ಬಗ್ಗೆ ಅಥವಾ ನೀರಾವರಿ ಕೆಲಸಗಳಿಗಾಗಿಯಾಗಲಿ ಅವುಗಳ ಸುತ್ತಲೀ ಯಾನಾ ಹುಟ್ಟುವಳೀ ಪ್ರಕಾರ ತೆರಿಗೆಗಳು" ಯಂಬ ಮಾತುಗಳು ಬಿಟ್ಟು ಬಿಡಲ್ಪಡತಕ್ಕದ್ದು.

(3) 7ನೇ ರೂಲ್‌ನಲ್ಲಿ "ಖಾಲಿಪಡಿಸಿದ ಕಮ್ಮಿಷನರು ಯಾವ ತರಗತಿಗಳಿಗೆ ಕೇರಿಯಿರುತ್ತಾನೊ ಅಂಥಾ ತರಗತಿಗಳ" ಯೆಂಬು ಮಾತುಗಳಿಗೆ ಬದಲಾಗಿ "ಖಾಲಿಪಡಿಸಿದ ಕಮ್ಮಿರ್ಷರು ಯಾವ ತರಗತಿಗೆ ಪ್ರತಿನಿಧಿಯಾಗಿದ್ದನೊ ಅಂಥಾ ತರಗತಿಯ" ಯಂಬ ಮಾತ ಗಳು ಕೇರಿಸತಕ್ಕದ್ದು.

(4) 9ನೇ ರೂಲ್‌ನಲ್ಲಿ "ಭರ್ತಿಯಾಗತಕ್ಕ" ಯಂಬ ಮಾತಿನ ಆಜೆಗೆ "ಅತನು ಕೇರಿರತಕ್ಕ ತರಗತಿಯ ಪ್ರತಿನಿಧಿಗಳಲ್ಲಿ" ಯಂಬ ಮಾತುಗಳು ಕೇರಿಸತಕ್ಕದ್ದು.

ಹುಕ್ಕುಂ ಬಮೋಜೀಬ

ಜೆಜ್. ವೈಲಿ, ಮೇಜರ್
ರೆಸೀಡೆಂಟರ ಅಸಿಸ್ಟೆಂಟ್.

ಮೈಸೂರು ಚೀಫ್ ಕೋರ್ಟ್‌ನಲ್ಲಿ.

ಕ್ರಿಮಿನಲ್ ತರಫ್.

ಸ್ರ 1884ನೇ ಇಸವಿ ಏಪ್ರೆಲ್ 2ನೇ ಮಕ್ಕುಂ ರೂಲ್‌ಆಫ್ ಪ್ರಾಕ್ಟೀಸ್ ನಂಬರ್ 32.

ವಾರಂಟು ವಿನಹಾ ಪೊಲೀಸ್ ಆಫೀಸರ್‌ಗಳು ದಸ್ತಗಿರಿ ಮಾಡತಕ್ಕ ಮೊಕದ್ದಮೆಗಳ ಕಿವಾಯಿ ಇತರ ಮೊಕದ್ದಮೆಗಳಲ್ಲಿ ಕ್ರಿಮಿನಲ್ ಕೋರ್ಟುಗಳಿಂದ ಕೊಡೋಣಾಗುವ ಪ್ರೊಸೆಸ್‌ಗಳ ಜಾರೀ ಬಗ್ಗೆ ಚಾರ್ಜುಮಾಡಬೇಕಾದ ರುಸುಂ ವಿಷಯದಲ್ಲಿ ಯೇರ್ಪಾಡಾದ ಇದರ ಡಿ ಯಿರುವ ರೂಲ್ಸ್‌ಯಾನೆ ನಿಬಂಧನೆಗಳು ಗವರ್ನಮೆಂಟಿನವರಿಂದ ಮಂಜೂರಾಗಲ್ಪಟ್ಟು, ಸ್ರ 1870ನೇ ಇಸವಿ ಕೋರ್ಟುಫೀಸ್ ಆಕ್ಟ್ 20ನೇ ಸೆಕ್ಷರ್ 2ನೇ ಕ್ಲಾಜ್ ಅನುಸರಿಸಿ ಫಾಯಿಷ್ ಮಾಡಲ್ಪಟ್ಟಿರುತ್ತೆ.

1. ಕ್ರಿಮಿನಲ್ ಕೋರ್ಟುಗಳಿಂದ ಕೊಡೋಣಾಗುವ ಪ್ರೊಸೆಸ್ ಜಾರೀ ಬಗ್ಗಾಗಿ ಯಿದರ ಸಂಗಡ ಲಗ್ಗತ್ತಾಡಿರುವ ಷೆಡ್ಯೂಲ್‌ಯಾನೆ ಪಟ್ಟಿಯಲ್ಲಿ ಕಂಡ ಮೇರಿಗೆ ಯಾವನು ಪ್ರೊಸೆಸ್ಸು ಕೊಡಬೇಕೆಂದು ಖಾಯಿಷ್ ಮಾಡುತ್ತಾನೋ ಅವನಿಂದ ರುಸುಂ ವಸೂಲ್ ಮಾಡತಕ್ಕದ್ದು, ಮತ್ತು ಅಂಥಾ ರುಸುಂ ವಾಯಿದೆ ಳಗಾಗಿ ಕೊಡುವ ವರಿಗೂ ಸದರೀ ಪ್ರೊಸೆಸ್ಸು ಜಾರೀ ಮಾಡಲ್ಪಡತಕ್ಕದ್ದಲ್ಲವು.

2. ಪ್ರೊಸೆಸ್ಸುಗಳನ್ನು ಕೊಡತಕ್ಕ ಕೋರ್ಟಿನವರು ಅನ್ಯಥಾ ಅಪ್ಪಣೆ ಮಾಡದೆ ಯಿರುವ ಪಕ್ಷಕ್ಕೆ ಈ ವರಿಗಿನಂತೆ ಯಲ್ಲಾ ಪ್ರೊಸೆಸ್ಸುಗಳೂ ಪೊಲೀಸಿನವರಿಂದ ಜಾರೀಯಾಗಲ್ಪಡತಕ್ಕದ್ದು.

3. ಯಲ್ಲಾ ಪ್ರೊಸೆಸ್ಸುಗಳೂ ಜಾರೀ ಆಗತಕ್ಕದ್ದು ಕೋರ್ಟಿನ ಹೆಡ್ ಮಿನಿಸ್ಟೀರಿಯಲ್ ಆಫೀಸರಿನ ವಿಚಾರಣೆಗೆ ವಳಪಟ್ಟಿರತಕ್ಕದ್ದು.

ಷೆಡ್ಯೂಲ್.

		ರೂ.	ಆ.	ಪೈ.
1.	ಪ್ರತಿವಾದಿಗೆ ಸರ್ವ್	0	8	0
	ಮತ್ತು ಪ್ರತಿ ಪ್ಲೊಬ್ಬ ಜಾಸ್ತಿ ಪ್ರತಿವಾದಿಗೆ ಯೇಕ ಕಾಲದಲ್ಲಿ ಅಪೇಕ್ಷಿಸಿ ಅವನು ಆಜೂ ಬಾಜು ವಾಸಸ್ತ ನಾಗಿದ್ದರೆ.	0	4	0
2.	ಸಾಕ್ಷಿ ಸರ್ವ್	0	8	0
	ಮತ್ತು ಪ್ರತಿ ಜಾಸ್ತಿ ಸಾಕ್ಷಿಗೆ ಯೇಕ ಕಾಲದಲ್ಲಿ ಅಪೇಕ್ಷಿಸಿ ಅಂಥಾ ಸಾಕ್ಷಿಯು ಆಜು ಬಾಜು ವಾಸಸ್ತ ನಾಗಿ ಯಿದ್ದರೆ.	0	4	0
3.	ದಸ್ತಗಿರಿ ವಾರಂಟು ಬಗ್ಗೆ	1	0	0
4.	ಇತರ ವಿಧವಾಗಿ ವಿಧಿಸಲ್ಪಡದೆ ಯಿರುವ ನೋಟೀಸ್ ಆರ್ಡರ್ ಇಂಜಕ್ಷರ್ಷ ಅಥವಾ ವಾರಂಟಿಗೆ.	0	8	0

9